ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.

ಉಪಸ್ಥಿತರುಃ- ಶಾರದಾದೇವಿ ಸಿ.ಹಟ್ಟಿ ಬಿ.ಕಾಂ.,ಎಲ್.ಎಲ್.ಬಿ., (Spl),

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹರಿಹರ.

ದಿನಾಂಕ 09 ನೇ ಜೂನ್ 2023

ಅಸಲು ದಾವೆ ಸಂಖ್ಯೆ 86/2014

ವಾದಿಃ-

ಹೆಚ್.ಬಿ.ಗಂಗಾಧರಪ್ಪ ಬಿನ್ ಮುರಿಗೆಪ್ಪ

ವಿರುದ್ಧ

ಪ್ರತಿವಾದಿಗಳುಃ-

ಹೆಚ್.ಕೆಂಚಪ್ಪ ಬಿನ್ ಮುರಿಗೆಪ್ಪ ಮತ್ತು ಇತರರು

ಮಧ್ಯಂತರ ಅರ್ಜಿ ಸಂಖ್ಯೆ- 16 ಮತ್ತು 17

ಅರ್ಜಿದಾರರು ಃ-

ಹೆಚ್.ಬಿ.ಗಂಗಾಧರಪ್ಪ ಬಿನ್ ಮುರಿಗೆಪ್ಪ

(ಅರ್ಜಿದಾರರ ಪರ ವಕೀಲರು - ಶ್ರೀ ಬಿ.ಎಂ.ಎಸ್.)

ವಿರುದ್ಧ

ಎದುರುದಾರರು ಃ-

ಹೆಚ್.ಕೆಂಚಪ್ಪ ಬಿನ್ ಮುರಿಗೆಪ್ಪ ಮತ್ತು ಇತರರು

(ಎದುರುದಾರರ ಪರ ವಕೀಲರು – ಶ್ರೀ ಬಿ.ಹೆಚ್.)

ಮಧ್ಯಂತರ ಅರ್ಜಿ ಸಂಖ್ಯೆ-16 ಮತ್ತು 17 ರ ಮೇಲೆ ಆದೇಶ

ವಾದಿ/ಅರ್ಜಿದಾರ ಮಧ್ಯಂತರ ಅರ್ಜಿ ಸಂಖ್ಯೆ-16 ನ್ನು ಸಿ. ಪ್ರ. ಸಂ. ಕ್ರಮಾದೇಶ 16 ನಿಯಮ 1(ಎ) ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ-17 ನ್ನು ಸಿ. ಪ್ರ. ಸಂ. ಕಲಂ.151 ರ ಅಡಿಯಲ್ಲಿ ಸಲ್ಲಿಸಿ, 2 ಮತ್ತು 4 ನೇ ಪ್ರತಿವಾದಿಯರನ್ನು ವಾದಿ ಪರ ಸಾಕ್ಷಿದಾರರನ್ನಾಗಿ ವಿಚಾರಣೆ ಮಾಡಲು ಮತ್ತು ವಾದಿ ಪರ ಹೆಚ್ಚುವರಿ ಸಾಕ್ಷಿಗೆ ಅನುಮತಿ ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

2. ಮಧ್ಯಂತರ ಅರ್ಜಿಗಳನ್ನು ವಾದಿ/ಅರ್ಜಿದಾರ ತನ್ನ ಪ್ರಮಾಣಪತ್ರಗಳೊಂದಿಗೆ ಸಲ್ಲಿಸಿ, ಅವುಗಳಲ್ಲಿ ವಿವರವಾದ ಕಾರಣವನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

3. ಎದುರುದಾರ/1 ನೇ ಪ್ರತಿವಾದಿ ಈ ಮಧ್ಯಂತರ ಅರ್ಜಿಗಳಿಗೆ ತಕರಾರುಗಳನ್ನು ಸಲ್ಲಿಸಿ, ಅವುಗಳಲ್ಲಿ ವಿವರವಾದ ಕಾರಣಗಳನ್ನು ಹೇಳಿ ಸದರಿ ಕಾರಣಗಳ ಮೇಲೆ ಈ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

4. ಉಭಯಪಕ್ಷಗಾರರ ಪರ ವಕೀಲರ ವಾದ ವಿವಾದವನ್ನು ಆಲಿಸಲಾಯಿತು.

5. ನನ್ನ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆಃ–

ಅಂಶ–1 ವಾದಿ/ಅರ್ಜಿದಾರ ಮಧ್ಯಂತರ ಅರ್ಜಿ ಸಂಖ್ಯೆ–16 ಮತ್ತು 17 ರಲ್ಲಿ ಕೋರಿರುವಂತೆ ಈ ಮಧ್ಯಂತರ ಅರ್ಜಿಗಳನ್ನು ಪುರಸ್ಕರಿಸಲು ಇರುವಂತಹ ಕಾರಣಗಳನ್ನು ತೋರಿಸಿದ್ದಾರೆಯೇ?

ಅಂಶ– 2 ಯಾವ ಆದೇಶ?

6. ಮೇಲಿನ ಅಂಶಗಳಿಗೆ ಈ ಕೆಳಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ಉತ್ತರಿಸುತ್ತಿದ್ದೇನೆಃ–

ಅಂಶ–1 ನಕಾರಾತ್ಮಕ

ಅಂಶ–2 ಅಂತಿಮ ಆದೇಶದಂತೆಃ

## ಕಾರಣಗಳು

7. ಅಂಶ–1 – ವಾದಿಯು, ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳ ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನತೆಯನ್ನು ಕೋರಿ ದಾವಾ ಸಲ್ಲಿಸಿದ್ದು, ಪ್ರಸ್ತುತ ದಾವೆಯಲ್ಲಿ ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆ ಮುಕ್ತಾಯವಾಗಿ ವಾದ ಮಂಡನೆಗೆ ದಿನಾಂಕವನ್ನು ನಿಗದಿಪಡಿಸಿದಾಗ ವಾದಿ ಪರ ವಕೀಲರು 2 ಮತ್ತು 4 ನೇ ಪ್ರತಿವಾದಿಯರು ವಾದಿ ಪರ ಸಾಕ್ಷಿದಾರರಾಗಿ ವಿಚಾರಣೆ ಮಾಡಲು ಅವಕಾಶ ಕೊಡಬೇಕೆಂದು ಅರ್ಜಿಗಳನ್ನು ಸಲ್ಲಿಸಿದ್ದು, ವಾದಿಯು ತನ್ನ ಪ್ರಮಾಣಪತ್ರದಲ್ಲಿ 1 ನೇ ಪ್ರತಿವಾದಿಯು ದಿಃ02/03/2023 ರಂದು ಭೇಟಿಯಾಗಿ ತನಗೆ ಅನುಕೂಲವಾಗುವಂತೆ ಇಬ್ಬರು ಪ್ರತಿವಾದಿಯರಿಗೆ ತಾನು ನೇಮಿಸಿಕೊಂಡ ವಕೀಲರ ಮೂಲಕವೇ ವಕಾಲತ್ ಹಾಕಿಸಿ, ವಿವಿಧ ಕಾಗದಪತ್ರಗಳಿಗೆ ತಮ್ಮಿಂದ ಸಹಿ ಪಡೆದಿದ್ದಾರೆ. ಅವುಗಳಲ್ಲಿ ಏನು ಬರೆದಿದೆ ಎಂದು ತಮಗೆ ತಿಳಿದಿಲ್ಲ, ವಾಸ್ತವ ಅಂಶಗಳು ಗೊತ್ತಾಗುತ್ತವೆ ಎಂಬ ಕಾರಣಕ್ಕೆ ತಮ್ಮನ್ನು ನ್ಯಾಯಾಲಯದ

ವಿಚಾರಣೆಗೆ ಹಾಜರಾಗದಂತೆ ತಡೆದಿದ್ದಾರೆಂದು ತಿಳಿಸಿರುತ್ತಾರೆ. ಆದ್ದರಿಂದ 2 ಮತ್ತು 4 ನೇ ಪ್ರತಿವಾದಿಯರನ್ನು ವಾದಿ ಪರವಾಗಿ ಸಾಕ್ಷಿ ವಿಚಾರಣೆ ಮಾಡಿಸಿಕೊಳ್ಳಲು ಅನುಮತಿ ನೀಡಬೇಕೆಂದು ಪ್ರಾರ್ಥಿಸಿಕೊಂಡಿರುತ್ತಾರೆ.

8. 1 ರಿಂದ 7 ನೇ ಪ್ರತಿವಾದಿಯರು ಬಿ.ಹೆಚ್.ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ, ದಿಃ18/12/2014 ರಂದು ಪ್ರತಿವಾದಪತ್ರವನ್ನು ಸಲ್ಲಿಸಿದ್ದಾರೆ. 1 ರಿಂದ 7 ನೇ ಪ್ರತಿವಾದಿಯರು ಬಿ.ಹೆಚ್.ವಕೀಲರ ಮೂಲಕ ಹಾಜರಾಗಿದ್ದು, ಈಗ 2 ಮತ್ತು 4 ನೇ ಪ್ರತಿವಾದಿಯರು, 1 ನೇ ಪ್ರತಿವಾದಿ ಮತ್ತು ತಮ್ಮ ವಕೀಲರ ವಿರುದ್ಧ ಪ್ರಕರಣದ ಬಗ್ಗೆ ಮಾಹಿತಿ ತಿಳಿಸದೇ ತಮ್ಮ ಪರವಾಗಿ ಪ್ರತಿವಾದಪತ್ರ ಸಲ್ಲಿಸಿ ತಮಗೆ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಲು ಬಿಡುತ್ತಿಲ್ಲ ಎಂದು ವಾದಿಯು ತನ್ನ ಪ್ರಮಾಣಪತ್ರದಲ್ಲಿ ಹೇಳಿದ್ದಾರೆ. 2 ಮತ್ತು 4 ನೇ ಪ್ರತಿವಾದಿಯರು ದಿಃ18/12/2014 ರಲ್ಲಿ ಪ್ರತಿವಾದಪತ್ರ ಸಲ್ಲಿಸಿದ್ದಾರೆ. ಅಲ್ಲಿಂದ 2023 ರವರೆಗೂ ವಾದಿಗೆ 2 ಮತ್ತು 4 ನೇ ಪ್ರತಿವಾದಿಯರು ಭೇಟಿಯಾಗಿರುವುದಿಲ್ಲ. ವಾದಿಯ ತನ್ನ ಪ್ರಮಾಣಪತ್ರದಲ್ಲಿ ದಿಃ02/03/2023 ರಂದು ಭೇಟಿಯಾಗಿ ವಿಷಯ ತಿಳಿಸಿದ್ದಾರೆಂದು ಹೇಳಿದ್ದಾರೆ. 2 ಮತ್ತು 4 ನೇ ಪ್ರತಿವಾದಿಯರು ಈಗಲೂ ನ್ಯಾಯಾಲಯದಲ್ಲಿ ಬಿ.ಹೆಚ್.ವಕೀಲರ ಮೂಲಕ ಹಾಜರಾಗಿದ್ದು, ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿ ಮತ್ತು ಪ್ರತಿವಾದಿ ಪರ ವಕೀಲರ ವಿರುದ್ಧ ಆರೋಪ ಮಾಡುತ್ತಿದ್ದಾರೆ. 2 ಮತ್ತು 4 ನೇ ಪ್ರತಿವಾದಿಯರು ತಮ್ಮ ವಕೀಲರ ಮೇಲೆ ವಿಶ್ವಾಸ ಇರದೇ ಇದ್ದಲ್ಲಿ ಬೇರೆ ವಕೀಲರನ್ನು ನೇಮಿಸಿಕೊಳ್ಳಲು ಅವಕಾಶ ಇರುತ್ತದೆ. 2 ಮತ್ತು 4 ನೇ ಪ್ರತಿವಾದಿಯರು 2014 ರಿಂದ ಉಭಯ ಪಕ್ಷಗಾರರ ಸಾಕ್ಷಿ ವಿಚಾರಣೆ ಮುಕ್ತಾಯವಾಗುವವರೆಗೆ ಯಾವುದೇ ಸಂಗತಿಗಳನ್ನು ಪ್ರಸ್ತಾಪಿಸದೇ 3 ನೇ ಪ್ರತಿವಾದಿ 1 ನೇ ಪ್ರತಿವಾದಿಯ ಪರವಾಗಿ ಸಾಕ್ಷಿ ಹೇಳಿದ್ದಾರೆಂದು ವಾದಿಯು 2 ಮತ್ತು 5 ನೇ ಪ್ರತಿವಾದಿಯರನ್ನು ನ್ಯಾಯಾಲಯಕ್ಕೆ ಕರೆದುಕೊಂಡು ಬಂದು ತನ್ನ ಪರವಾಗಿ ಸಾಕ್ಷಿ ಹೇಳಿಸಲು ಪ್ರಯತ್ನಿಸುತ್ತಿದ್ದಾರೆ. 1 ರಿಂದ 5 ಮತ್ತು

7 ನೇ ಪ್ರತಿವಾದಿ ಪರ ವಕೀಲರು ತಕರಾರುಗಳನ್ನು ಸಲ್ಲಿಸಿ ಅರ್ಜಿಯ ಎಲ್ಲಾ ವಿವರಗಳನ್ನು ಅಲ್ಲಗಳೆದಿರುತ್ತಾರೆ. 2, 3 ಮತ್ತು 5 ನೇ ಪ್ರತಿವಾದಿಯರು ತಮ್ಮ ಕಛೇರಿಗೆ ಸ್ವ ಇಚ್ಛೆಯಿಂದ ಬಂದು ಮಾಹಿತಿ ಕೊಟ್ಟ ಮೇರೆಗೆ ಅವರ ಪರವಾಗಿ ದಿಃ18/12/2014 ರಂದು ಪ್ರತಿವಾದಪತ್ರ ಸಲ್ಲಿಸಿದ್ದು, ಸದರಿ ಪ್ರತಿವಾದಪತ್ರದ ವಿವರಗಳನ್ನು 2, 3 ಮತ್ತು 5 ನೇ ಪ್ರತಿವಾದಿಯರಿಗೆ ಓದಿ ಹೇಳಿದ್ದು, ಈಗ 2 ಮತ್ತು 4 ನೇ ಪ್ರತಿವಾದಿಯರು ತಮಗೆ ಪ್ರತಿವಾದಪತ್ರದ ಸಂಗತಿಗಳು ಗೊತ್ತಿರುವುದಿಲ್ಲ ಎಂದು ತಮ್ಮ ವಿರುದ್ಧ ವೃಥಾ ಆರೋಪ ಮಾಡುತ್ತಿರುವುದರಿಂದ ಪ್ರಸ್ತುತ ಅರ್ಜಿಗಳನ್ನು ವಜಾಗೊಳಿಸುವಂತೆ ಪ್ರಾರ್ಥಿಸಿಕೊಂಡಿರುತ್ತಾರೆ.

9. 2 ಮತ್ತು 4 ನೇ ಪ್ರತಿವಾದಿಯರು ದಿಃ18/12/2014 ರಂದು ಪ್ರತಿವಾದಪತ್ರ ಸಲ್ಲಿಸಿದ್ದಾರೆ. ಈಗ ವಾದಿಯ ಪರವಾಗಿ ಸಾಕ್ಷಿ ಹೇಳುತ್ತೇವೆಂದು ವಾದಿಯ ಮೂಲಕ ಪ್ರಸ್ತುತ ಅರ್ಜಿಗಳನ್ನು ಸಲ್ಲಿಸಿದ್ದಾರೆ. 2 ಮತ್ತು 4 ನೇ ಪ್ರತಿವಾದಿಯರಿಗೆ ತಮ್ಮ ವಕೀಲರ ಮೇಲೆ ವಿಶ್ವಾಸ ಇಲ್ಲದೇ ಇದ್ದ ಪಕ್ಷದಲ್ಲಿ ಅವರಿಂದ ತಮ್ಮ ವಕಾಲತನಾಮೆಯನ್ನು ಹಿಂಪಡೆದು ಬೇರೆ ವಕೀಲರನ್ನು ನೇಮಿಸಿಕೊಳ್ಳಲು ಅವಕಾಶ ಇರುವುದರಿಂದ 2 ಮತ್ತು 4 ನೇ ಪ್ರತಿವಾದಿಯರು ನ್ಯಾಯಾಲಯದಲ್ಲಿ 1 ನೇ ಪ್ರತಿವಾದಿಯ ಮತ್ತು ತಮ್ಮ ವಕೀಲರ ವಿರುದ್ಧ ಯಾವುದೇ ಪ್ರಮಾಣಪತ್ರಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ವಾದಿ ಸಲ್ಲಿಸಿದ ಅರ್ಜಿಗಳನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅಂಶ-1 ನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

10. <u>ಅಂಶ-2</u> - ಮೇಲಿನ ಅಂಶದಲ್ಲಿ ಚರ್ಚಿಸಲಾದ ಕಾರಣಗಳಿಗೆ ಈ ಕೆಳಕಂಡಂತೆ ಮಾಡಿದಃ

<u>ಆದೇಶ</u>

ವಾದಿ/ಅರ್ಜಿದಾರ ಮಧ್ಯಂತರ ಅರ್ಜಿ ಸಂಖ್ಯೆ-16 ಸಿ. ಪ್ರ. ಸಂ.

ಕ್ರಮಾದೇಶ 16 ನಿಯಮ 1(ಎ) ಹಾಗೂ ಮಧ್ಯಂತರ ಅರ್ಜಿ ಸಂಖ್ಯೆ-17 ಸಿ. ಪ್ರ. ಸಂ. ಕಲಂ.151ರ ಅಡಿಯಲ್ಲಿ ಸಲ್ಲಿಸಿರುವ ಮಧ್ಯಂತರ ಅರ್ಜಿಗಳನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶವಿಲ್ಲ.

(ನನ್ನ ಉಕ್ತಲೇಖನದ ಪ್ರಕಾರ ಶೀಘ್ರಲಿಪಿಗಾರರಿಂದ ನೇರವಾಗಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಅದರಲ್ಲಿದ್ದ ಲೋಪದೋಷಗಳನ್ನು ತಿದ್ದಿ ಇಂದು ದಿನಾಂಕ 09 ನೇ ಜೂನ್ 2023 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

ಸಹಿ/-

(ಶಾರದಾದೇವಿ ಸಿ.ಹಟ್ಟಿ),

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,

ಹರಿಹರ.